**ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)**

**ಸತ್ರ ಪ್ರಕರಣ ಸಂಖ್ಯೆಃ 5077 /2023**

ಪ್ರಾ ಸಾ 3 ಚಾ ಸಾ 1

ಹೆಸರುಃ ಕೃಷ್ಣ ಇ ಪಿ

ತಂದೆಯ ಹೆಸರುಃ ಲೇಟ್ ಪುಟ್ಟರಾಮೇಗೌಡ

ವಯಸ್ಸುಃ 49 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಇಂಗಲಗುಪ್ಪೆ

**ದಿಃ 26.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. ಮೃತ ಜಯಕುಮಾರ್ ನನ್ನ ತಂಗಿ ಗಂಡ -ಭಾವ . ಚಾಸಾ2 ನನ್ನ ಚಿಕ್ಕಪ್ಪನ ಮಗಳು, ಆಕೆ ಮೃತ ಜಯಕುಮಾರನ ಪತ್ನಿ . ಚಾಸಾ3 ಮೃತ ಜಯಕುಮಾರ ಮತ್ತು ಚಾಸಾ2 ರವರ ಮಗಳು .

2. ಈಗ ಜಯಕುಮಾರ್ ಬದುಕಿಲ್ಲ.

3. ಜಯಕುಮಾರರವರು ಪಾಂಡವಪುರದಲ್ಲಿ ಅಮೃತ ಟ್ರೇಡರ್ಸ್ ಎಂಬ ಕೀಟನಾಶಕ ಔಷಧಿ ಅಂಗಡಿಯನ್ನು ಇಟ್ಟಿದ್ದರು . ಅವರು ಟಿ ಎಸ್ ಛತ್ರದಲ್ಲಿ ವಾಸ ಇದ್ದರು .

4. ದಿಃ 7.7.2013 ರಂದು ರಾತ್ರಿ 8.00-8.15 ಗಂಟೆಗೆ ಅಂಗಡಿ ಮುಚ್ಚಿ ಚಾಸಾ3 ರವರ ಜೊತೆಯಲ್ಲಿ ಅವರ ಸ್ವಗ್ರಾಮಕ್ಕೆ ಟಿ ವಿ ಎಸ್ ಮೊಪೆಡ್- ಕೆ ಎ 11- ಕ್ಯೂ -7587 ರಲ್ಲಿ ಹೋಗುತ್ತಿದ್ದರು .

5. ಹಾಗೆ ಹೋಗುತ್ತಿದ್ದಾಗ ಚಾಸಾ3 ರವರು ತನಗೆ ಮೂಸ ವಿಸರ್ಜನೆ ಮಾಡಬೇಕು ಎಂದು ಮೃತ ಜಯಕುಮಾರನಲ್ಲಿ ಹೇಳಿದಳು . ಅದಕ್ಕಾಗಿ ಆತ ಊರ ಹತ್ತಿರ ಹೋಗುವ ಕೆ ಹೊಸೂರು ಗೇಟ್ , ದೊಡ್ಡಣ್ಣನ ಆಲೆ ಮನೆ ಬಳಿ ಮೊಪೆಡ್ ನ್ನು ಊರಿಗೆ ಹೋಗಬೇಕಾದರೆ ಎಡಬದಿಯಲ್ಲಿ ನಿಲ್ಲಿಸಿದರು . ಆ ಸಂದರ್ಭದಲ್ಲಿ ಯಾವುದೋ ಗಾಡಿ ಹಿಂದಿನಿಂದ ಹೊಡೆದುಕೊಂಡು ಹೋಯಿತು. ಅದರಿಂದ

ಜಯಕುಮಾರನಿಗೆ ಎಡಕಿವಿ , ಎಡಭುಜ , ಎಡಮಂಡಿ ಗಳಲ್ಲಿ ತೀವ್ರ ರಕ್ತಸ್ರಾವವಾಗಿದ್ದು ಸ್ಥಳದಲ್ಲೇ ಮೃತ ಹೊಂದಿರುತ್ತಾರೆ .

6. ಚಾಸಾ3 ವರ್ಷಿಣಿಗೆ ಎಡ ಬುಜ , ಎಡ ಪಕ್ಕೆ , ಎಡ ಭಾಗವು ಸಂಪೂರ್ಣ ಪೆಟ್ಟಾಗಿರುತ್ತದೆ. ಆ ಸಂದರ್ಭದಲ್ಲಿ ನಮ್ಮ ಇಂಗಲಗುಪ್ಪೆ ಗ್ರಾಮದ ರವಿ ಮತ್ತು ಜಯರಾಮೇಗೌಡ ಅವರು ನೋಡಿ ವರ್ಷಿಣಿಯನ್ನು ಪಾಂಡವಪುರದ ಸರಕಾರಿ ಆಸ್ಪತ್ರೆಗೆ ಸೇರಿಸಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ನಾರಾಯಣ ಹೃದಯಾಲಯಕ್ಕೆ ದಾಖಲಿಸಿರುತ್ತಾರೆ .

7. ಘಟನೆ ನಡೆದ ಸ್ಥಳವು ತುಂಬಾ ಟ್ರಾಫಿಕ್ ಇರುವ ಜಾಗವಾಗಿದುದರಿಂದ ಪೊಲೀಸರು ಮತ್ತು ನಾವು ಸೇರಿ ಜಯಕುಮಾರನ ಶವವನ್ನು ಶವಪರೀಕ್ಷೆಗಾಗಿ ಪಾಂಡವಪುರ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋದೆವು .

8. ಮರು ದಿವಸ ಬೆಳಗ್ಗೆ 7.35 ರಿಂದ 8.20 ರವರೆಗೆ ಸ್ಥಳ ಮಹಜರನ್ನು ಜರುಗಿಸಿದರು . ಸದರಿ ಸ್ಥಳದಲ್ಲಿ ಮೊಪೆಡ ನ

ಇಂಡಿಕೇಟರ್ , ಮಡ್ ಗಾರ್ಡ್ , ಒಂದು ಕೆಂಪು ಟೋಪಿ ಇತ್ತು. ಅಲ್ಲೆಲ್ಲಾ ಗಾಜಿನ ಚೂರುಗಳು ಬಿದ್ದಿದ್ದವು . ಸ್ಕೂಟರ್ ರಸ್ತೆ ಬದಿಯಲ್ಲಿ ಬಿದ್ದಿತ್ತು.

9. ಸ್ಥಳದ ಪಂಚನಾಮೆ ಮಾಡುವಾಗ ನನ್ನ ಜೊತೆಯಲ್ಲಿ ರಾಮೇಗೌಡ ಮತ್ತು ಮಂಜು ಅಂದರೆ ಚಾಸಾ13 ಮತ್ತು 14 ಇದ್ದರು . ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆ ಮಾಡಿ ಗುರುತನ್ನು ಹಾಕಿದರು .

10. ಸದರಿ ಪಂಚನಾಮೆಯನ್ನು ಓದಿ ಸಹಿಯನ್ನು ಹಾಕಿರುತ್ತೇನೆ . ಸದರಿ ಪಂಚನಾಮಾ ಮಹಜರನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ಒಂದು ದಾಖಲೆಯನ್ನು ನೋಡಿ ಅದು ಸದರಿ ಮಹಜರು ಎಂದು ಗುರುತಿಸಿದ್ದು ಅದನ್ನು ನಿಪಿ 5 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 5 ಎ ಎಂದು ಗುರುತಿಸಲಾಯಿತು.

11. ದಿಃ 8.7.2013 ರಂದು ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟೆನು. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ .

ಸಾಕ್ಷಿಯು  ಒಂದು ದಾಖಲೆಯನ್ನು ನೋಡಿ ಅದನ್ನು ತಾನು ಕೊಟ್ಟ ದೂರು ಎಂದು ಗುರುತಿಸಿದ್ದು ಹಾಗೂ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು  ಅದನ್ನು  ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ6(ಎ) ಎಂದು  ಗುರುತಿಸಲಾಯಿತು.

12.  ಆ ದಿನ ನನ್ನ ಸಮಕ್ಷಮದಲ್ಲಿ ವಶಪಡಿಸಿಕೊಂಡಿರುವ ಮೊಪೆಡ್ , ಮೇಲೆ ಹೇಳಿದ ಮೊಪೆಡ್ ನ ಇಂಡಿಕೇಟರ್ ಮತ್ತು ಗಾಜಿನ ಚೂರುಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ಕಾಕಿ ಕಲರಿನ ರಟ್ಟಿನ ಡಬ್ಬದಿಂದ  ಒಂದು ಪ್ಲಾಸ್ಟಿಕ ಕವರಿನಲ್ಲಿ ಇರಿಸಲಾಗಿದ್ದ ಇಂಡಿಕೇಟರ್ ನ ತುಂಡು ಮತ್ತು ಗಾಜಿನ ಚೂರುಗಳನ್ನು ಗುರುತಿಸಿದ್ದು ಅವುಗಳನ್ನು ಒಟ್ಟಾಗಿ  ಈಗಾಗಲೇ ಎಸ್ ಸಿ 5072/2016 ರಲ್ಲಿ ಮುದ್ದೆಮಾಲು 1 ಎಂದು  ಗುರುತಿಸಲಾಗಿದೆ.

(ಈ ಬಗ್ಗೆ ಎಸ್ ಸಿ ನಂ  5072/2016 ನ ಕಡತದಿಂದ ಯಾವುದೇ ದೃಡೀಕೃತ ಪ್ರತಿಗಳನ್ನು ಮಾನ್ಯ ಅಭಿಯೋಜಕರು ಸಲ್ಲಿಸಿರುವುದಿಲ್ಲ.)

13. ಮೊಪೆಡ್ ಗಾಡಿಯನ್ನು ಯಾರು ರಿಲೀಸ್ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.  ಸಾಕ್ಷಿಯು ಒಂದು ಪೊಟೋವನ್ನು ನೋಡಿ  ಅದನ್ನು ಅಪಘಾತ ನಡೆದ ಮೃತನ ವಾಹನ ಎಂದು ಗುರುತಿಸಿದ್ದು ಅದು ಈಗಾಗಲೇ

ನಿಪಿ 1 ಎಂದು ಗುರುತಾಗಿರುತ್ತದೆ .

14. ನಾನು ಘಟನಾ ಸ್ಥಳಕ್ಕೆ ಹೋಗಿದ್ದಾಗ ಜಯಕುಮಾರನ ಶವ ಮತ್ತು ಗಾಡಿ ಬಿದ್ದಿದ್ದ ಜಾಗವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಒಂದು ಫೋಟೋವನ್ನು ನೋಡಿ ಅದುವೇ ಜಯಕುಮಾರನ ಶವ ಮತ್ತು ಗಾಡಿ ಬಿದ್ದಿದ್ದ ಜಾಗ ಎಂದು ಗುರುತಿಸಿದ್ದು ಅದು ಈಗಾಗಲೇ ನಿಪಿ 3 ಆಗಿರುತ್ತದೆ .

<u>ಪಾಟೀ ಸವಾಲಿಗಾಗಿ ಮುಂದೂಡಲಾಯಿತು.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)